ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 03-04-1991.

# "ಸರ್ವ ಹದ್ದುಗಳಿಂದ ಹೊರ ಬಂದು ಬೇಹದ್ದಿನ ವೈರಾಗಿ ಆಗಿರಿ"

(सर्व हदों से निकल बेहद के वैरागी बनो)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಕಲ್ಪದ ನಂತರ ಮತ್ತೆ ಮಿಲನ ಮಾಡಲು ಎಲ್ಲಾ ಮಕ್ಕಳು ತಮ್ಮ ಮಧುರ ಮನೆ ಮಧುಬನಕ್ಕೆ ಬಂದು ತಲುಪಿದ್ದೀರಿ. ಸಾಕಾರಿ ವತನದ ಮಧುರ ಮನೆ ಮಧುಬನವೇ ಆಗಿದೆ ಇಲ್ಲಿ ತಂದೆ ಮತ್ತು ಮಕ್ಕಳ ಅತ್ಮಿಕ ಮೇಳವಾಗುತ್ತದೆ. ಮಿಲನದ ಮೇಳವಾಗುತ್ತದೆ. ಎಲ್ಲಾ ಮಕ್ಕಳು ಮಿಲನದ ಮೇಳದಲ್ಲಿ ಬಂದಿದ್ದೀರಿ. ಇದು ತಂದೆ ಮತ್ತು ಮಕ್ಕಳ ಮಿಲನದ ಮೇಳ ಕೇವಲ ಸಂಗಮಯುಗದಲ್ಲಿ ಮತ್ತು ಮಧುಬನದಲ್ಲಿಯೇ ಆಗುತ್ತದೆ. ಆದ್ದರಿಂದ ಎಲ್ಲರೂ ಓಡಿಬಂದು ಮಧುಬನಕ್ಕೆ ತಲುಪಿದ್ದೀರಿ. ಮಧುಬನದಲ್ಲಿ ಬಾಪ್‌ದಾದಾರವರು ಸಾಕಾರ ರೂಪದಲ್ಲಿ ಮಿಲನ ಮಾಡಿಸುತ್ತಾರೆ ಮತ್ತು ಜೊತೆ-ಜೊತೆ ಸಹಜ ನೆನಪಿನ ಮುಖಾಂತರ ಅವ್ಯಕ್ತ ಮಿಲನವೂ ಮಾಡಿಸುತ್ತಾರೆ ಏಕೆಂದರೆ ಮಧುಬನದ ಧರಣಿ ಆತ್ಮಿಕ ಮಿಲನ ಮಾಡುವಂತಹದ್ದು, ಸಾಕಾರ ರೂಪದಲ್ಲಿ ಮಿಲನದ ಅನುಭೂತಿ ಮಾಡುವಂತಹ ವರದಾನ ಸಿಕ್ಕಿದೆ. ವರದಾನಿ ಭೂಮಿ ಆಗಿರುವ ಕಾರಣ ಸಹಜವಾಗಿ ಮಿಲನದ ಅನುಭವವನ್ನು ಮಾಡುತ್ತೀರಿ. ಮತ್ತೆ ಯಾವುದೇ ಸ್ಥಾನದಲ್ಲಿ ಜ್ಞಾನಸಾಗರ ಮತ್ತು ಜ್ಞಾನನದಿಗಳ ಮಿಲನದ ಮೇಳ ಆಗುವುದಿಲ್ಲ. ಸಾಗರ ಮತ್ತು ನದಿಗಳ ಮಿಲನದ ಮೇಳ ಈ ಒಂದೇ ಸ್ಥಾನದಲ್ಲಿ ಆಗುತ್ತದೆ. ಅಂತಹ ಮಹಾನ್ ವರದಾನಿ ಧರಣಿಗೆ ಬಂದಿದ್ದೀರೆಂದು ತಿಳಿದಿದ್ದೀರಾ?

ತಪಸ್ಯಾ ವರ್ಷದಲ್ಲಿ ವಿಶೇಷವಾಗಿ ಈ ಕಲ್ಪದಲ್ಲಿ ಮೊದಲನೇ ಬಾರಿ ಮಿಲನ ಮಾಡುವ ಮಕ್ಕಳಿಗೆ ಗೋಲ್ಡನ್ ಚಾನ್ಸ್ (ಸ್ವರ್ಣಿಮ ಅವಕಾಶ) ಸಿಕ್ಕಿದೆ. ಎಷ್ಟು ಅದೃಷ್ಟವಂತರು? ತಪಸ್ಸಿನ ಆದಿಯಲ್ಲೇ ಹೊಸ ಮಕ್ಕಳಿಗೆ ಅಧಿಕ ಬಲ ಸಿಕ್ಕಿದೆ. ಅಂದಾಗ ಅದಿಯಲ್ಲೇ ಈ ಅಧಿಕ ಬಲ ಭವಿಷ್ಯದಲ್ಲಿ ಮುಂದುವರೆಯಲು ಸಹಯೋಗಿ ಆಗುತ್ತದೆ. ಆದ್ದರಿಂದ ಹೊಸ ಮಕ್ಕಳಿಗೆ ಡ್ರಾಮಾ ಸಹ ಮುಂದೆವರೆಯಲು ಸಹಯೋಗ ಕೊಟ್ಟಿದೆ. ಅದ್ದರಿಂದ ನಾವು ಹಿಂದೆ ಬಂದಿದ್ದೇವೆ ಎಂದು ದೂರು ಹೇಳಲು ಸಾಧ್ಯವಿಲ್ಲ, ತಪಸ್ಯಾ ವರ್ಷದ

ವರದಾನವೂ ಸಹ ಸಿಕ್ಕಿದೆ. ತಪಸ್ಯಾ ವರ್ಷದಲ್ಲಿ ವರದಾನಿ ಭೂಮಿಗೆ ಬರುವಂತಹ ಅಧಿಕಾರ, ಅವಕಾಶ ಸಿಕ್ಕಿದೆ. ಈ ಅಧಿಕ ಭಾಗ್ಯ ಕಡಿಮೆ ಅಲ್ಲ. ಈ ವರ್ಷದ, ಮಧುಬನದ ಮತ್ತು ಸ್ವಯಂ ಪುರುಷಾರ್ಥದ ಮೂರೂ ವರದಾನಗಳು ವಿಶೇಷವಾಗಿ ಹೊಸ ಮಕ್ಕಳಿಗೆ ಸಿಕ್ಕಿದೆ. ಅಂದಾಗ ಎಷ್ಟು ಅದೃಷ್ಟವಂತರಾಗಿದ್ದೀರಿ. ಇಷ್ಟು ಅವಿನಾಶಿ ಭಾಗ್ಯದ ನಶೆ ಜೊತೆಯಲ್ಲಿ ಇಟ್ಟುಕೊಳ್ಳಬೇಕು. ಕೇವಲ ಇಲ್ಲಿಯವರೆಗೆ ನಶೆ ಇರುವುದಲ್ಲ, ಆದರೆ ತಂದೆ ಅವಿನಾಶಿ ಆಗಿದ್ದಾರೆ, ತಾವು ಅವಿನಾಶಿ ಶ್ರೇಷ್ಠ ಆತ್ಮರಾಗಿದ್ದೀರಿ ಅಂದಾಗ ಭಾಗ್ಯವೂ ಅವಿನಾಶಿಯಾಗಿದೆ. ಅವಿನಾಶಿ ಭಾಗ್ಯವನ್ನು ಅವಿನಾಶಿಯಾಗಿ ಇಟ್ಟುಕೊಳ್ಳಬೇಕು. ಇದು ಕೇವಲ ಸಹಜ ಕೊಡುವಂತಹ ಮಾತಾಗಿದೆ. ಟೆನ್ಶನ್ ಇರುವವರಿಗೆ ಅಟೆನ್ಶನ್ (ಗಮನ) ಇರುವುದಿಲ್ಲ. ಅಟೆನ್ಶನ್ ಸಹಜವಾಗಿರಬೇಕು, ಕಷ್ಟ ಆಗುತ್ತದೇನು? ನನ್ನಬಾಬಾ ಎಂದು ತಿಳಿದುಕೊಂಡಿದ್ದೇವೆ, ಒಪ್ಪಿಕೊಂಡಿದ್ದೇವೆ. ಅಂದಾಗ ಯಾವುದನ್ನು ತಿಳಿದುಕೊಂಡಿದ್ದೇವೆ. ಒಪ್ಪಿಕೊಂಡಿದ್ದೇವೆ, ಅನುಭವ ಮಾಡಿದ್ದೇವೆ, ಅಧಿಕಾರವನ್ನು ಪ್ರಾಪ್ತಿ ಮಾಡಿಕೊಂಡಿದ್ದೇವೆ ಅಂದಾಗ ಕಷ್ಟವೇನಿದೆ? ಕೇವಲ ನನ್ನ ಬಾಬಾ ಎನ್ನುವುದು ಒಂದೇ ಅನುಭವ ಮಾಡುತ್ತಾ ಇರಬೇಕು. ಇದೇ ಪೂರ್ತಿ ಜ್ಞಾನವಾಗಿದೆ.

ಒಂದು "ಬಾಬಾ" ಶಬ್ದದಲ್ಲಿ ಪೂರ್ತಿ ಆದಿ-ಮಧ್ಯ-ಅಂತ್ಯದ ಜ್ಞಾನ ಸಮಾವೇಶವಾಗಿದೆ ಏಕೆಂದರೆ ಬೀಜ ಆಗಿದ್ದಾರಲ್ಲವೇ. ಸದಾ ಸಹಜವಾಗಿಯಲ್ಲವೇ. ಕೆಲವೊಮ್ಮೆ ಸಹಜ. ಕೆಲವೊಮ್ಮೆ ಕಷ್ಟವಾಗಿರಬಾರದು ಸದಾ ಬಾಬಾ ನನ್ನವರಾಗಿದ್ದಾರೆಯೋ ಅಥವಾ ಕೆಲವೊಮ್ಮೆ ಆಗಿದ್ದಾರೆಯೇ? ಯಾವಾಗ ಸದಾ ಬಾಬಾ ನನ್ನವರು ಅಂದಮೇಲೆ ನೆನಪೂ ಸಹ ಸದಾ ಸಹಜವಾಗಿರಬೇಕು. ಯಾವುದೇ ಕಷ್ಟದ ಮಾತಿಲ್ಲ. ಭಗವಂತ ನನ್ನವರು ಎಂದು ಹೇಳಿದ್ದಾರೆ ಮತ್ತೆ ತಾವು ನನ್ನವರು ಎಂದು ಹೇಳಿದ್ದೀರಿ. ಮತ್ತೆ ಏನು ಕಷ್ಟವಿದೆ ಆದ್ದರಿಂದ ವಿಶೇಷವಾಗಿ ಹೊಸ ಮಕ್ಕಳು ಇನ್ನೂ ಮುಂದೆವರೆಯಬೇಕು. **ಈಗಲೂ ಸಹ ಮುಂದೆ ಹೋಗಲು ಅವಕಾಶವಿದೆ. ಈಗ ಅಂತ್ಯದ ಸಮಾಪ್ತಿಯ ಗಂಟೆ ಬಾರಿಸಿಲ್ಲ. ಆದ್ದರಿಂದ ಹಾರುತ್ತಾ ಇರಿ ಮತ್ತೆ ಅನ್ಯರನ್ನು ಹಾರಿಸುತ್ತಾ ಇರಿ. ಇದಕ್ಕೆ ವಿಧಿಯಾಗಿದೆ - ವ್ಯರ್ಥವನ್ನು ಸಮಾಪ್ತಿ ಮಾಡುವುದು. ಜಮಾದ ಖಾತೆ ಹೆಚ್ಚಿಸಿಕೊಳ್ಳುತ್ತಾ ಹೋಗಿ ಏಕೆಂದರೆ 63 ಜನ್ಮಗಳಿಂದ ಉಳಿತಾಯ ಮಾಡಿರಲಿಲ್ಲ ಆದರೆ ಕಳೆದುಕೊಂಡಿದ್ದೇವೆ. ಎಲ್ಲಾ ಖಾತೆಗಳನ್ನು ವ್ಯರ್ಥವಾಗಿ ಕಳೆದುಕೊಂಡು ಸಮಾಪ್ತಿ ಮಾಡಿಬಿಟ್ಟಿದ್ದೇವೆ. ಶ್ವಾಸದ ಖಜಾನೆ, ಸಂಕಲ್ಪದ ಖಜಾನೆ. ಸಮಯದ ಖಜಾನೆ. ಗುಣಗಳ ಖಜಾನೆ, ಶಕ್ತಿಗಳ ಖಜಾನೆ, ಜ್ಞಾನದ ಖಜಾನೆಯನ್ನೂ ಸಹ ಕಳೆದುಕೊಂಡಿದ್ದೇವೆ. ಎಷ್ಟು ಖಾತೆ ಖಾಲಿಯಾಗಿದೆ. ಈಗ ಈ ಎಲ್ಲಾ ಖಾತೆಗಳನ್ನು ಜಮಾ ಮಾಡಿಕೊಳ್ಳಬೇಕು. ಜಮಾ ಮಾಡಿಕೊಳ್ಳುವಂತಹ ಸಮಯವೂ ಇದೇ ಆಗಿದೆ. ವಿಧಿಯೂ ಸಹ ತಂದೆಯ ಮುಖಾಂತರ ಸಹಜವಾಗಿ ಸಿಗುತ್ತಿದೆ. ವಿನಾಶಿ ಖಜಾನೆಗಳು ಖರ್ಚು ಮಾಡುವುದರಿಂದ ಕಡಿಮೆಯಾಗುತ್ತದೆ. ಮತ್ತೆ ಈ ಎಲ್ಲಾ ಖಜಾನೆಗಳು ಎಷ್ಟು ಸ್ವಯಂ ಪ್ರತಿ ಮತ್ತೆ ಅನ್ಯರ ಪ್ರತಿ ಶುಭವೃತ್ತಿಯಿಂದ ಕಾರ್ಯದಲ್ಲಿ ಉಪಯೋಗ ಮಾಡುತ್ತೀರೋ ಅಷ್ಟೇ ವೃದ್ಧಿಯಾಗುತ್ತವೆ. ಇದು ಜಮಾ ಮಾಡಿಕೊಳ್ಳುವಂತಹ ವಿಧಿಯಾಗಿದೆ. ಅಲ್ಲಿ ಇಟ್ಟುಕೊಳ್ಳುವುದು ಜಮಾ ಮಾಡಿಕೊಳ್ಳುವ ನಿಧಿಯಾಗಿದೆ. ಇಲ್ಲಿ ಉಪಯೋಗಿಸುವುದು ಜಮಾ ಮಾಡಿಕೊಳ್ಳುವ ವಿಧಿಯಾಗಿದೆ.** ವ್ಯತ್ಯಾಸವಿದೆ. ಸಮಯವನ್ನು ಸ್ವಯಂನ ಮತ್ತು ಅನ್ಯರ ಪ್ರತಿ ಶುಭಕಾರ್ಯದಲ್ಲಿ ತೊಡಗಿಸುತ್ತಾ ಹೋಗಿ. ಜ್ಞಾನವನ್ನು ಕಾರ್ಯದಲ್ಲಿ ಉಪಯೋಗಿಸಿ. ಈ ರೀತಿ ಗುಣಗಳನ್ನು, ಶಕ್ತಿಗಳನ್ನು ಎಷ್ಟು ಕಾರ್ಯದಲ್ಲಿ ಉಪಯೋಗಿಸುತ್ತೀರೋ ಅಷ್ಟು ವೃದ್ಧಿಯಾಗುತ್ತದೆ. ಹೇಗೆ ಅವರು ಲಾಕರ್‌ಲ್ಲಿ ಕೂಡಿಟ್ಟುಕೊಳ್ಳುತ್ತಾರೆ ಮತ್ತೆ ಬಹಳ ಜಮಾ ಆಗಿದೆ ಎಂದು ತಿಳಿದುಕೊಳ್ಳುತ್ತಾರೆ. ಅದೇ ರೀತಿ ತಾವು ನನ್ನ ಬುದ್ಧಿಯಲ್ಲಿ ಬಹಳ ಜ್ಞಾನವಿದೆ, ಗುಣಗಳು, ಶಕ್ತಿಗಳೂ ಸಹ ಬಹಳ ಇದೆ ಎಂದು ಯೋಚನೆ ಮಾಡಬಾರದು. ಬೀಗವನ್ನು ಹಾಕಿಡಬೇಡಿ, ಉಪಯೋಗ ಮಾಡಿ. ತಿಳಿದಿದೆಯೇ? ಜಮಾ ಮಾಡಿಕೊಳ್ಳುವ ವಿಧಿ ಯಾವುದು? ಕಾರ್ಯದಲ್ಲಿ ತೊಡಗುವುದು. ಸ್ವಯಂನ ಪ್ರತಿ ಉಪಯೋಗ ಮಾಡಿ ಇಲ್ಲವೆಂದರೆ ಕಳೆದುಹೋಗುತ್ತದೆ. ಕೆಲವು ಮಕ್ಕಳು ನನ್ನಲ್ಲಿ ಎಲ್ಲಾ ಖಜಾನೆಗಳು ಸಮಾವೇಶವಾಗಿದೆ ಎಂದು ಹೇಳುತ್ತಾರೆ. ಆದರೆ ಸಮಾವೇಶವಾಗಿರುವ ಚಿಹ್ನೆ ಏನು? ಸಮಾವೇಶವಾಗಿದೆ ಅರ್ಥಾತ್ ಜಮಾ ಆಗಿದೆ ಎಂದರ್ಥ. ಆದ್ದರಿಂದ ಅದರ ಚಿಹ್ನೆ ಸ್ವಯಂನ ಪ್ರತಿ ಮತ್ತು ಅನ್ಯರ ಪ್ರತಿ ಸಮಯದಲ್ಲಿ ಕೆಲಸಕ್ಕೆ ಬರಬೇಕು. ಕೆಲಸಕ್ಕೆ ಬರುತ್ತಿಲ್ಲ ಆದರೆ ಬಹಳ ಜಮಾ ಆಗಿದೆ ಅರ್ಥಾಥ್ ಯಾಥಾರ್ಥ ಜಮಾದ ವಿಧಿ ಎಂದು ಕರೆಯುವುದಿಲ್ಲ.

ಆದ್ದರಿಂದ ಒಂದುವೇಳೆ ಯಥಾರ್ಥ ವಿಧಿ ಇಲ್ಲವೆಂದರೆ ಸಮಯದಲ್ಲಿ ಸಂಪೂರ್ಣತೆಯ ಸಿದ್ಧಿ ಸಿಗುವುದಿಲ್ಲ. ಮೋಸವಾಗಿಬಿಡುತ್ತದೆ, ಸಿದ್ಧಿ ಸಿಗುವುದಿಲ್ಲ.

ಗುಣಗಳನ್ನು, ಶಕ್ತಿಗಳನ್ನು ಕಾರ್ಯದಲ್ಲಿ ತೊಡಗಿಸಿದರೆ ವೃದ್ಧಿ ಆಗುತ್ತಾ ಇರುತ್ತದೆ. ಅಂದಾಗ ಜಮಾ ಮಾಡುವ ವಿಧಿ ತಮ್ಮದನ್ನಾಗಿ ಮಾಡಿಕೊಳ್ಳಿ. ಮತ್ತೆ ವ್ಯರ್ಥದ ಖಾತೆ ಸ್ವತಹವಾಗಿಯೇ ಪರಿವರ್ತನೆಯಾಗಿ ಸಫಲ ಆಗಿಬಿಡುತ್ತದೆ. ಹೇಗೆ ಭಕ್ತಿಮಾರ್ಗದಲ್ಲಿ ನಿಯಮವಿರುತ್ತದೆ ಎಷ್ಟು ತಮ್ಮ ಹತ್ತಿರ ಸ್ಥೂಲ ಧನವಿರುತ್ತದೆ, ಅದನ್ನು ದಾನ ಮಾಡಿ ಸಫಲ ಮಾಡಿದ್ದೇ ಆದರೆ ವೃದ್ಧಿಯಾಗುತ್ತದೆಂದು ಹೇಳುತ್ತಾರೆ. ಭಕ್ತಿಯಲ್ಲೂ ಸಹ ಸಫಲ ಮಾಡಿಕೊಳ್ಳಲು ಎಷ್ಟು ಉಮ್ಮಂಗ- ಉತ್ಸಾಹವನ್ನು ಕೊಡುತ್ತಾರೆ. ಅಂದಾಗ ತಾವೂ ಸಹ ಈ ತಪಸ್ಯಾವರ್ಷದ ಕೇವಲ ಎಷ್ಟು ವ್ಯರ್ಥವಾಗಿ ಹೋಗಿದೆ? ಎಂದು ಪರಿಶೀಲನೆ ಮಾಡಿಕೊಳ್ಳುವುದಲ್ಲ. ವ್ಯರ್ಥವಾಗಿ ಹೋದರೆ ಅದು ಬೇರೆ ಮಾತಾಗಿದೆ ಆದರೆ ಎಷ್ಟು ಸಫಲ ಮಾಡಿಕೊಂಡಿದ್ದೇವೆಂದು ಚೆಕ್ (ಪರಿಶೀಲನೆ) ಮಾಡಿಕೊಳ್ಳಬೇಕು. ಏನೆಲ್ಲಾ ಖಜಾನೆಗಳನ್ನು ಮುಂಚೆ ತಿಳಿಸಿದ್ದಾರೆಯೋ ಅವೆಲ್ಲವನ್ನೂ ಸಫಲ ಮಾಡಿಕೊಳ್ಳಬೇಕು. ಗುಣಗಳೂ ಸಹ ಪ್ರಭುವಿನ ಉಡುಗೊರೆಯಾಗಿದೆ. ಇದು ನನ್ನ ಗುಣ, ನನ್ನ ಶಕ್ತಿಯಾಗಿದೆ ಎನ್ನುವುದು ಸ್ವಪ್ನದಲ್ಲೂ ಯೋಚನೆ ಮಾಡಬಾರದು. ಯಾವುದು ತಂದೆಯ, ಪ್ರಭುವಿನ, ಪರಮಾತ್ಮನ ಉಡುಗೊರೆಯಾಗಿದೆ ಅದು ನನ್ನದು ಎಂದು ತಿಳಿದುಕೊಳ್ಳುವುದು ಮಹಾಪಾಪವಾಗಿದೆ. ಕೆಲವೊಮ್ಮೆ ಕೆಲವು ಮಕ್ಕಳು ಸಾಧಾರಣ ಭಾಷೆಯಲ್ಲಿ ನನ್ನ ಗುಣವನ್ನು ಉಪಯೋಗಿಸುವುದಿಲ್ಲ. ನನ್ನ ಈ ಶಕ್ತಿಯಿದೆ, ನನ್ನ ಬುದ್ಧಿ ಬಹಳ ಚೆನ್ನಾಗಿದೆ. ಇದನ್ನು ಉಪಯೋಗಿಸುವುದಿಲ್ಲ ಎಂದು ಹೇಳುತ್ತಾರೆ. "ನನ್ನದು" ಎನ್ನುವುದು ಎಲ್ಲಿಂದ ಬಂದಿದೆ? ನನ್ನದು ಎಂದು ಹೇಳಿದಾಗ ಮೈಲಿಗೆಯಾಗಿಬಿಡುತ್ತದೆ. ಭಕ್ತಿಯಲ್ಲೂ ಸಹ 63 ಜನ್ಮಗಳಿಂದ ನನ್ನದು ಎಂದು ತಿಳಿಯಬೇಡಿ, ನಿಮ್ಮದು ಎಂದು ತಿಳಿಯಬೇಕೆಂದು ಶಿಕ್ಷಣ ಕೊಡುತ್ತಿದ್ದರು. ಆದರೂ ಒಪ್ಪಿಕೊಂಡಿಲ್ಲ. ಅಂದಾಗ ಜ್ಞಾನಮಾರ್ಗದಲ್ಲಿ ನಿಮ್ಮದು ಎಂದು ಹೇಳಿ ನನ್ನದು ಎಂದು ತಿಳಿದುಕೊಳ್ಳುವುದು ಮೋಸವಾಗಿದೆ. ಇದು ಇಲ್ಲಿ ನಡೆಯುವುದಿಲ್ಲ!. ಆದ್ದರಿಂದ ಪ್ರಭು ಪ್ರಸಾದವನ್ನು ನನ್ನದು ಎಂದು ತಿಳಿದುಕೊಳ್ಳುವುದು ಅಭಿಮಾನ ಮತ್ತು ಅಪಮಾನವಾಗಿದೆ. "ಬಾಬಾ-ಬಾಬಾ" ಎನ್ನುವ ಶಬ್ದವನ್ನು ಎಂದೂ ಮರೆಯಬಾರದು. ಬಾಬಾನೇ ಶಕ್ತಿ ಕೊಟ್ಟಿದ್ದಾರೆ. ಬುದ್ಧಿ ಕೊಟ್ಟಿದ್ದಾರೆ. ತಂದೆಯ ಕಾರ್ಯವಾಗಿದೆ. ಬಾಬನ ಸೆಂಟರ್. ಎಲ್ಲಾ ಜಾನ ವಸ್ತುಗಳಾಗಿವೆ. ನನ್ನ ಸೆಂಟರ್. ನಾನು ಮಾಡಿದ್ದು, ನನಗೆ ಅಧಿಕಾರವಿದೆ ಎಂದು ತಿಳಿಯಬಾರದು. "ನನ್ನದು" ಎನ್ನುವ ಶಬ್ದ ಎಲ್ಲಿಂದ ಬಂದಿದೆ? ನಿಮ್ಮದೇನು? ಮೂಟೆ ಕಟ್ಟಿ ಇಟ್ಟಿದ್ದೀರಾ? ಕೆಲವು ಮಕ್ಕಳು ನಾವು ಸೆಂಟರ್ ಮಾಡಲು ಮನೆಯನ್ನು ಮಾಡಿದ್ದೇವೆ. ಅಂದಾಗ ನಮಗೆ ಅಧಿಕಾರವಿದೆ ಎಂದು ನಶೆಯಲ್ಲಿ ಇರುತ್ತಾರೆ. ಆದರೆ ಯಾರ ಸೆಂಟರ್ ಮಾಡಿದ್ದೀರಿ ? ಬಾಬಾನ ಸೆಂಟರ್ ಆಗಿದೆಯಲ್ಲವೇ. ಅಂದಾಗ ಯಾವಾಗ ತಂದೆಗೆ ಅರ್ಪಣೆ ಮಾಡಿದಾಗ ಮತ್ತೆ ನಿಮ್ಮದು ಎಲ್ಲಿಂದ ಬಂದಿದೆ? ನನ್ನದು ಎನ್ನುವುದು ಎಲ್ಲಿಂದ ಬಂದಿದೆ? ಯಾವಾಗ ಬುದ್ಧಿ ಬದಲಾವಣೆಯಾಗುತ್ತದೋ ಆಗ ನನ್ನದು ಎನ್ನುತ್ತೀರಿ. ನನ್ನದು-ನನ್ನದು ಎನ್ನುವುದೇ ಮೈಲಿಗೆ ಮಾಡಿಬಿಟ್ಟಿದೆ ಮತ್ತೆ ಮೈಲಿಗೆ ಆಗಬೇಕೇನು? ಯಾವಾಗ ಬ್ರಾಹ್ಮಣರಾಗಿದ್ದೀರೋ ಬ್ರಾಹ್ಮಣಜೀವನದಲ್ಲಿ ತಂದೆಗೆ ಮೊದಲು ಯಾವ ಪ್ರತಿಜ್ಞೆಯನ್ನು ಮಾಡಿದ್ದೀರಿ? ಹೊಸಬರು ಪ್ರತಿಜ್ಞೆ ಮಾಡಿದಿರಾ ಅಥವಾ ಹಳಬರು ಪ್ರತಿಜ್ಞೆಯನ್ನು ಮಾಡಿದಿರಾ? ಹೊಸಬರೂ ಸಹ ಈಗ ಹಳಬರು ಆಗಿ ಬಂದಿದ್ದೀರಲ್ಲವೇ? ನಿಶ್ಚಯಬುದ್ಧಿಯ ಫಾರಂ ತುಂಬಿಸಿ ಬಂದಿದ್ದೀರಲ್ಲವೇ? ಅಂದಾಗ ತನು-ಮನ-ಧನ ಮತ್ತು ಬುದ್ಧಿ ಎಲ್ಲಾ ನಿನ್ನದು ಎಂದು ಎಲ್ಲರ ಮೊಟ್ಟ ಮೊದಲನೇ ಪ್ರತಿಜ್ಞೆಯಾಗಿದೆ. ಈ ಪ್ರತಿಜ್ಞೆಯನ್ನು ಎಲ್ಲರೂ ಮಾಡಿದ್ದೀರಾ?

ಈಗ ಪ್ರತಿಜ್ಞೆ ಮಾಡುವವರು ಕೈ ಎತ್ತಿ. ಯಾರು ಸ್ವಲ್ಪ ಜೇಬು ಖರ್ಚಿಗೆ ಬೇಕೆಂದು ತಿಳಿಯುತ್ತಾರೋ, ಎಲ್ಲಾ ತಂದೆಗೆ ಕೊಟ್ಟಿಬಿಟ್ಟರೆ ಹೇಗೆ? ಸ್ವಲ್ಪ ಅಂತೂ ಹತ್ತಿರ ಇಟ್ಟುಕೊಳ್ಳಬೇಕು, ಯಾರು ಇದು ಬುದ್ಧಿವಂತಿಕೆಯ ಕೆಲಸ ಎಂದು ತಿಳಿಯುತ್ತಾರೋ ಅವರು ಕೈ ಎತ್ತಿ? ಸ್ವಲ್ಪ ಹತ್ತಿರ ಇಟ್ಟುಕೊಂಡಿದ್ದೀರೇನು? ನೋಡಿ ನಂತರ ನಮ್ಮನ್ನು ಯಾರು ನೋಡುತ್ತಾರೆ" ಎಂದು ಹೇಳಬಾರದು. ಇಷ್ಟು ಗುಂಪಲ್ಲ ಯಾರು ನೋಡುತ್ತಾರೆ? ತಂದೆಯ ಹತ್ತಿರ ಟಿ.ವಿ ಬಹಳ ಸ್ಪಷ್ಟವಾಗಿದೆ. ಅದರಿಂದ ಬಚ್ಚಿಟ್ಟುಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಯೋಚನೆ ಮಾಡಿ. ಅರ್ಥ ಮಾಡಿಕೊಂಡು. ಸ್ವಲ್ಪ ಇಟ್ಟುಕೊಳ್ಳಬೇಕು. ಭಲೆ ಇಟ್ಟುಕೊಳ್ಳಿ. ಪಾಂಡವರು ಏನು ತಿಳಿದುಕೊಂಡಿದ್ದೀರಿ? ಸ್ವಲ್ಪ

ಇಟ್ಟುಕೊಳ್ಳಬೇಕೇನು? ಚೆನ್ನಾಗಿ ಯೋಚನೆ ಮಾಡಿ. ಯಾರು ಇಟ್ಟುಗೊಳ್ಳಬೇಕೋ ಅವರು ಕೈ ಎತ್ತಿ, ಪಾರಾಗುತ್ತಾರೆ. ಇಲ್ಲವೆಂದರೆ ಈ ಸಮಯ. ಈ ಸಭೆ, ನಿಮ್ಮ ಭುಜಗಳನ್ನು ಅಲುಗಾಡಿಸುವುದು ಎಲ್ಲಾ ಕಾಣಿಸುತ್ತದೆ.ಎಂದೂ ನನ್ನತನವನ್ನು ಇಟ್ಟುಕೊಳ್ಳಬಾರದು. ತಂದೆ ಎಂದು ಹೇಳಿದಾಗ ಪಾಪವೆಲ್ಲಾ ಹೋಗುತ್ತದೆ. ತಂದೆ ಎಂದು ಹೇಳಿಲ್ಲವೆಂದರೆ ಪಾಪವಾಗಿಡುತ್ತದೆ. ಪಾಪಕ್ಕೆ ವಶರಾದಾಗ ಬುದ್ಧಿ ಕೆಲಸ ಮಾಡುವುದಿಲ್ಲ. ಎಷ್ಟು ತಿಳಿಸಿದರೂ ಇದು ಸರಿಯಾಗದೆ, ತಪ್ಪಲ್ಲ ಎಂದು ಹೇಳಿಬಿಡುತ್ತಾರೆ. ಈ ರೀತಿ ಆಗಲೇಬೇಕು. ತಂದೆಗೂ ದಯೆ ಬರುತ್ತದೆ ಏಕೆಂದರೆ ಆ ಸಮಯದಲ್ಲಿ ಪಾಪಕ್ಕೆ ವಶನಾಗಿಬಿಡುತ್ತಾರೆ. ತಂದೆಯನ್ನು ಮರೆತುಬಿಟ್ಟರೆ ಪಾಪವಾಗಿಬಿಡುತ್ತದೆ. ಮತ್ತೆ ಪಾಪಕ್ಕೆ ವಶವಾಗಿರುವ ಕಾರಣ ಏನೆಲ್ಲಾ ಮಾತನಾಡುತ್ತಾರೊ, ಏನು ಮಾಡುತ್ತಾರೋ ಅದನ್ನು ಸ್ವಯಂ ಕೂಡ ಅರ್ಥ ಮಾಡಿಕೊಳ್ಳುವುದಿಲ್ಲ ಏಕೆಂದರೆ ಪರವಶ ಆಗುತ್ತಾರೆ. ಅಂದಾಗ ಸದಾ ಜ್ಞಾನದ ನಶೆಯಲ್ಲಿ ಇರಬೇಕು. ಪಾಪದಲ್ಲಿ ಬರಬೇಡಿ. ಮಧ್ಯ-ಮಧ್ಯದಲ್ಲಿ ಮಾಯೆಯ ಅಲೆಗಳು ಬರುತ್ತವೆ. ತಾವು ಹೊಸಬರು ಈ ವಿಷಯಗಳಿಂದ ಬಚಾವ್ ಆಗಿಬಿಡಿ. ನನ್ನದು-ನನ್ನದು ಎನ್ನುವುದರಲ್ಲಿ ಬರಬಾರದು. ಸ್ವಲ್ಪ ಹಳಬರಾಗಿದ್ದೇ ಆದರೆ ನನ್ನದು-ನನ್ನದು ಎನ್ನುವ ಮಾಯೆ ಬಹಳ ಬಂದುಬಿಡುತ್ತದೆ. ನನ್ನ ವಿಚಾರ, ನನ್ನ ಬುದ್ಧಿಯೇ ಇಲ್ಲವೆಂದರೆ ನನ್ನ ವಿಚಾರ ಎಲ್ಲಿಂದ ಬಂದಿತು ಅಂದಾಗ ಜಮಾ ಮಾಡಿಕೊಳ್ಳುವ ವಿಧಿ ಏನು? ಕಾರ್ಯದಲ್ಲಿ ಉಪಯೋಗಿಸುವುದು. ಸಫಲ ಮಾಡಿ. ತಮ್ಮ ಈಶ್ವರೀಯ ಸಂಸ್ಕಾರಗಳಲ್ಲಿ ಸಫಲ ಮಾಡಿದ್ದೇ ಆದರೆ ವ್ಯರ್ಥ ಸಂಸ್ಕಾರ ಸ್ವತಹವಾಗಿ ಸಮಾಪ್ತಿಯಾಗಿಬಿಡುತ್ತದೆ. ಈಶ್ವರೀಯ ಸಂಸ್ಕಾರಗಳನ್ನು ಕಾರ್ಯದಲ್ಲಿ ಉಪಯೋಗಿಸಲಿಲ್ಲವೆಂದರೆ, ಲಾಕರ್‌ಲ್ಲಿ ಇಟ್ಟು ಮುಚ್ಚಿಟ್ಟಿದ್ದೇ ಆದರೆ ಹಳೆಯದು ಕೆಲಸ ಮಾಡುತ್ತದೆ. ಕೆಲವರಿಗೆ ಬ್ಯಾಂಕಿನಲ್ಲಿ ಅಥವಾ ಬೀರುವಾನಲ್ಲಿ ಇಟ್ಟುಕೊಳ್ಳುವಂತಹ ಅಭ್ಯಾಸವಿರುತ್ತದೆ. ಚೆನ್ನಾಗಿರುವ ಬಟ್ಟೆ. ಹಣ, ವಸ್ತುಗಳು ಎಲ್ಲಾ ಇರುತ್ತದೆ ಆದರೂ ಹಳೆಯದನ್ನೇ ಉಪಯೋಗಿಸುತ್ತಾರೆ. ಹಳೆಯ ವಸ್ತುಗಳ ಮೇಲೆ ಅವರಿಗೆ ಪ್ರೀತಿ ಇರುತ್ತದೆ. ಬೀರುವಾನಲ್ಲಿ ಇರುವ ವಸ್ತುಗಳು ಬಿರುವಾನಲ್ಲೇ ಇರುತ್ತದೆ. ಮತ್ತು ಹಳೆಯದರಿಂದಲೇ ಸಮಾಪ್ತಿಯಾಗಿಬಿಡುತ್ತಾರೆ. ಅಂದಾಗ ಹಳೆಯ ಸಂಸ್ಕಾರವನ್ನು ಉಪಯೋಗಿಸುವುದು ಈಶ್ವರೀಯ ಸಂಸ್ಕಾರಗಳನ್ನು ಲಾಕರ್‌ನಲ್ಲಿ ಇಟ್ಟುಕೊಳ್ಳುವುದು ಈ ರೀತಿ ಮಾಡಬಾರದು. ಕಾರ್ಯದಲ್ಲಿ ತೊಡಗಿಸಬೇಕು. ಸಫಲ ಮಾಡಿಕೊಳ್ಳಬೇಕು. ಎಷ್ಟು ಸಫಲವಾಗಿದೆ ಎಂದು ಚಾರ್ಟ್ ಇಟ್ಟುಕೊಳ್ಳಬೇಕು. ಸಫಲ ಮಾಡುವುದು ಅರ್ಥಾತ್ ಬಾಚಾವ್ ಮಾಡುವುದು ಮತ್ತೆ ವೃದ್ಧಿ ಮಾಡಿಕೊಳ್ಳುವುದು. ಮನಸ್ಸನ್ನು ಶಕ್ತಿಶಾಲಿ ವೃತ್ತಿಯ ಮುಖಾಂತರ ಸಫಲ ಮಾಡಿ,  ನನ್ನ ವೃತ್ತಿಯಂತೂ ಚೆನ್ನಾಗಿರುತ್ತದೆ ಆದರೆ ಎಷ್ಟು ಸಫಲವಾಗಿದೆ? ನನ್ನ ಸಂಸ್ಕಾರವೇ ಶಾಂತಿಯ ಸಂಸ್ಕಾರವಾಗಿದೆ ಎಂಬ ರೀತಿ ಅಲ್ಲ. ಆದರೆ ಎಷ್ಟು ಸಫಲ ಆಯಿತು? ಕಾರ್ಯದಲ್ಲಿ ತೊಡಗಿಸಿದ್ದೇನೆಯೇ? ಅಂದಾಗ ಈ ವಿಧಿಯನ್ನು ತಮ್ಮದನ್ನಾಗಿ ಮಾಡಿಕೊಂಡಾಗ ಸಂಪೂರ್ಣತೆಯ ಸಿದ್ಧಿಯನ್ನು ಸಹಜವಾಗಿ ಅನುಭವ ಮಾಡುತ್ತೀರಿ. ಸಫಲ ಮಾಡುವುದೇ ಸಫಲತೆಯ ಬೀಗದ ಕೈಯಾಗಿದೆ. ಏನು ಮಾಡಬೇಕೇಂದು ತಿಳಿದಿದೆಯೇ? ನಾನು ಬಹಳ ಗುಣವಂತ, ನಾನು ಚೆನ್ನಾಗಿ ಭಾಷಣ ಮಾಡುತ್ತೇನೆ. ನಾನು ಬಹಳ ಒಳ್ಳೆಯ ಜ್ಞಾನಿ ಆಗಿದ್ದೇನೆ. ನನ್ನ ಯೋಗವೂ ಬಹಳ ಚೆನ್ನಾಗಿರುತ್ತದೆಂದು ಕೇವಲ ನಿಮ್ಮಲ್ಲಿಯೇ ಖುಷಿ ಪಡೆಯಬೇಡಿ. ಅದರೆ ಚೆನ್ನಾಗಿದ್ದರೆ ಉಪಯೋಗ ಮಾಡಿರಿ. ಅದನ್ನು ಸಫಲ ಮಾಡಿ. ಕಾರ್ಯದಲ್ಲಿ ತೊಡಗಿಸುವುದು ಮತ್ತೆ ವೃದ್ಧಿ ಮಾಡುವುದು ಸಹಜ ವಿಧಿಯಾಗಿದೆ. ಪರಿಶ್ರಮವಿಲ್ಲದೆ ವೃದ್ಧಿಯಾಗಿಬಿಡುತ್ತದೆ ಮತ್ತೆ 21 ಜನ್ಮಗಳು ಆರಾಮವಾಗಿ ತಿನ್ನುತ್ತಿರಿ. ಅಲ್ಲಿ ಪರಿಶ್ರಮ ಪಡಬೇಕಾಗಿಲ್ಲ. ಒಳ್ಳೆಯದು.

**ನಾಲ್ಕಾರು ಕಡೆಯ ಎಲ್ಲಾ ಮಿಲನ ಮಾಡುವ, ಜ್ಞಾನರತ್ನಗಳನ್ನು ಧಾರಣೆ ಮಾಡುವ ಚಾತ್ರಕ ಆತ್ಮರಿಗೆ, ಆಕಾರ ರೂಪದಲ್ಲಿ ಅಥವಾ ಸಾಕಾರ ರೂಪದಲ್ಲಿ ಮಿಲನದ ಮೇಳ ಮಾಡುವಂತಹ ಶ್ರೇಷ್ಠ ಆತ್ಮರಿಗೆ, ಸದಾ ಸರ್ವ ಖಜಾನೆಗಳನ್ನು ಸಫಲ ಮಾಡಿ ಸಫಲತಾ ಸ್ವರೂಪರಾಗುವಂತಹ ಆತ್ಮರಿಗೆ, ಸದಾ ನನ್ನ ಬಾಬಾ ಮತ್ತಾವುದೇ ಹದ್ದಿನ ನನ್ನತನದ ಅಂಶವನ್ನೂ ಸಹ ಇಟ್ಟುಕೊಳ್ಳದೇ ಇರುವಂತಹ ಬೇಹದ್ದಿನ ವೈರಾಗಿ ಆತ್ಮರಿಗೆ, ಸದಾ ಪ್ರತಿ ಸಮಯದಲ್ಲಿ ವಿಧಿಯ ಮೂಲಕ ಸಂಪೂರ್ಣತೆಯ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ ಮಕ್ಕಳಿಗೆ, ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 03-04-1991.

***ಸರ್ವ ಹದ್ದುಗಳಿಂದ ಹೊರಬಂದು ಬೇಹದ್ದಿನ ವೈರಾಗಿಯಾಗಿರಿ.***

ಸದಾ ಪರಮಾತ್ಮ ನನ್ನವರಾಗಿದ್ದಾರೆ, ಎಂದ ಮೇಲೆ ನೆನಪು ಸಹ ಸದಾ ಸಹಜವಾಗಿರಬೇಕು. ಭಗವಂತ ನಿಮ್ಮನ್ನು ನನ್ನವರು ಎಂದು ಹೇಳಿದ್ದಾರೆ ಮತ್ತು ತಾವು ಪರಮಾತ್ಮನನ್ನು ನನ್ನವರೆಂದು ಹೇಳಿದ್ದೀರಿ. ಮತ್ತೆ ಇನ್ನೇನು ಕಷ್ಟವಿದೆ? ಈಗ ಇನ್ನೂ ಸಮಾಪ್ತಿಯ ಗಂಟೆ ಬಾರಿಸಿಲ್ಲ ಆದ್ದರಿಂದ ಹಾರುತ್ತಾ ಇರಿ ಮತ್ತು ಅನ್ಯರನ್ನು ಹಾರಿಸುತ್ತಾ ಇರಿ. ಅದಕ್ಕಾಗಿ ವ್ಯರ್ಥವನ್ನು ಸಮಾಪ್ತಿ ಮಾಡಿ ಜಮಾ ಖಾತೆಯನ್ನು ಹೆಚ್ಚಿಸಿಕೊಳ್ಳುತ್ತಾ ಹೋಗುವುದೇ ವಿಧಿಯಾಗಿದೆ. ವಿನಾಶಿ ಖಜಾನೆಗಳನ್ನು ಖರ್ಚು ಮಾಡುವುದರಿಂದ ಕಡಿಮೆಯಾಗುತ್ತವೆ. ಆದರೆ ಅವಿನಾಶಿ ಅರ್ಥಾಥ್ ಶ್ವಾಸದ ಖಜಾನೆ, ಸಂಕಲ್ಪದ ಖಜಾನೆ, ಸಮಯದ ಖಜಾನೆ, ಗುಣಗಳ ಖಜಾನೆ, ಶಕ್ತಿಯ ಖಜಾನೆ, ಜ್ಞಾನದ ಖಜಾನೆ ಈ ಎಲ್ಲಾ ಖಜಾನೆಗಳು ಎಷ್ಟು ಸ್ವಯಂ ಮತ್ತು ಅನ್ಯರ ಪ್ರತಿ ಶುಭವೃತ್ತಿಯಿಂದ ಕಾರ್ಯದಲ್ಲಿ ಉಪಯೋಗಿಸುತ್ತಿರೋ ಅಷ್ಟು ವೃದ್ಧಿಯಾಗುತ್ತದೆ. ಈ ಎಲ್ಲಾ ಖಜಾನೆಗಳು ಪ್ರಭುವಿನ ಉಡುಗೊರೆಯಾಗಿದೆ. ಇದು ನನ್ನ ಗುಣ, ನನ್ನ ಶಕ್ತಿಯಾಗಿದೆ ಎನ್ನುವುದು ಸ್ವಪ್ನದಲ್ಲಿಯೂ ಯೋಚಿಸಬಾರದು. ಯಾವುದು  ಪ್ರಭುವಿನ, ಪರಮಾತ್ಮನ ಉಡುಗೊರೆಯಾಗಿದೆಯೋ ಅದು ನನ್ನದು ಎಂದು ತಿಳಿದುಕೊಳ್ಳುವುದು ಮಹಾ ಪಾಪವಾಗಿದೆ. ಈ ನನ್ನದು ಎನ್ನುವುದು ಎಲ್ಲಿಂದ ಬಂದಿತು? ಮೂಟೆ ಕಟ್ಟಿ ಇಟ್ಟಿದ್ದೀರಾ? ನನ್ನದು ಎಂದು ಹೇಳಿದಾಗಲೇ ಕೊಳಕಾಗಿಬಿಡುತ್ತದೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ತಿಳಿಸಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆ ಮತ್ತು ನನ್ನ ಮಿಲನದ ಆತ್ಮಿಕ ಮೇಳವನ್ನು ಆಚರಿಸಿಕೊಂಡಿದ್ದೇನೆ.

2. ನಾನು ಕೇವಲ ನನ್ನ ತಂದೆ  ಎಂಬ ಅನುಭವ ಮಾಡುವ ಸಂಪೂರ್ಣ ಜ್ಞಾನಿ.

3. ಭಗವಂತನು ನನ್ನನ್ನು ನನ್ನವರು ಎಂದರು, ನಾನು ಭಗವಂತನನ್ನು ನನ್ನವರು ಎನ್ನುವುದರಿಂದ ಸ್ಮೃತಿ ಸಹಜವಾಗಿ ಇದೆ.

4. ನಾನು ವ್ಯರ್ಥವನ್ನು ಸಮಾಪ್ತಿ ಮಾಡಿ ನಾನೂ ಹಾರುತ್ತಾ ಇತರರನ್ನು ಕೂಡ ಹಾರಿಸುತ್ತಾ ಇದ್ದೇನೆ.

5. ನಾನು ಅವಿನಾಶಿ ಖಜಾನೆಗಳನ್ನು ಸ್ವಯಂ ಮತ್ತು ಇತರರ ಪ್ರತಿ ಶುಭವೃತ್ತಿಯಿಂದ ಕಾರ್ಯದಲ್ಲಿ ಉಪಯೋಗಿಸುತ್ತಾ ಜಮಾ ಖಾತೆಯನ್ನು ಬೆಳೆಸಿಕೊಂಡಿದ್ದೇನೆ. (ಅವಿನಾಶಿ ಖಾಜಾನೆಗಳು ಅರ್ಥಾತ್ ಶ್ವಾಸದ ಖಜಾನೆ, ಸಮಯದ ಖಜಾನೆ, ಸಂಕಲ್ಪದ ಖಜಾನೆ, ಶಕ್ತಿಗಳ ಖಜಾನೆ, ಗುಣದ ಖಜಾನೆ ಮತ್ತು ಜ್ಞಾನದ ಖಜಾನೆ).

6. ನಾನು ಸರ್ವ ಖಜಾನೆಗಳನ್ನು ಪ್ರಭುವಿನ ಉಡುಗೊರೆಯಾಗಿ ಭಾವಿಸಿರುವ ಬ್ರಾಹ್ಮಣ ಸ್ವರೂಪ.

7. ನಾನು ಈಶ್ವರೀಯ ಸಂಸ್ಕಾರಗಳನ್ನು ಕಾರ್ಯದಲ್ಲಿ ಉಪಯೋಗಿಸುತ್ತಾ ವ್ಯರ್ಥ ಸಂಸ್ಕಾರಗಳನ್ನು ಸಮಾಪ್ತಿ ಮಾಡಿಕೊಂಡಿದ್ದೇನೆ.

8. ನಾನು ಮನಸ್ಸಿನಿಂದ, ವಾಣಿಯಿಂದ, ಸಂಬಂಧ ಸಂಪರ್ಕಗಳಿಂದ, ಕರ್ಮದಿಂದ, ನನ್ನ ಶ್ರೇಷ್ಠ ಸಾಂಗತ್ಯದಿಂದ, ನನ್ನ ಅತಿ ಶಕ್ತಿಶಾಲಿ ವೃತ್ತಿಯಿಂದ ಈಶ್ವರೀಯ ಸಂಸ್ಕಾರಗಳನ್ನು ಸಫಲ ಮಾಡಿಕೊಂಡಿದ್ದೇನೆ.